


'ವಿಚಿತ್ರ ಪ್ರಪಂಚ' ಚಿತ್ರದ ಹಾಡು

ಕಠಿಣವಾಗಿದ್ದ ಮಾತುಗಳನ್ನು ಹೇಳಲಾಗಲಿಲ್ಲ. ಕೊಲ್ಹಾಪುರದ ಶಾಲಿನಿ ಸಿನಿಟೋನ್‌ನಲ್ಲಿ ನಡೆದ ಚಿತ್ರೀಕರಣ ಸ್ಥಳಕ್ಕೂ ಬೇಂದ್ರೆಯವರು ಭೇಟಿ ನೀಡಿದ್ದರು. ಸಂಭಾಷಣೆ ಉಂಟು ಮಾಡಿದ ಸಮಸ್ಯೆಯಿಂದ ಹೊರಬರುವುದಕ್ಕೆ ನಂತರ ಸೋರಟ್ ಅಶ್ವತ್ಥ ಎಂದು ಜನಪ್ರಿಯರಾದ ಎನ್‌ಎಎನ್ ಸಹಾಯಕರಾದರು. ಬೇಂದ್ರೆಯವರಿಗೆ ಸಂಭಾಷಣೆ ರಚನೆಯಲ್ಲಿ ನೆರವು ನೀಡಿದ್ದರು. ವಿಜಯಶ್ರೀ ಚಿತ್ರಸಂಸ್ಥೆಯವರು ನಿರ್ಮಿಸಿದ ಈ ಚಿತ್ರಕ್ಕಾಗಿ ಬೇಂದ್ರೆಯವರು ಏಳು ಹಾಡುಗಳನ್ನು ರಚಿಸಿದ್ದರು. ಬಾಳಗಜಬರ್ ನಿರ್ದೇಶನದ ಚಿತ್ರದ ಗೀತೆಗಳಿಗೆ ಎಸ್. ಪುರುಷೋತ್ತಮ ಅವರು ಸಂಗೀತ ಸಂಯೋಜಿಸಿದ್ದರು.

**ನೀನೇ ಗತಿ ಕೃಷ್ಣಾ | ಏನೇನೂ ಇರದಿರೆ || ಪ ||**
**ನೀತಿಯಿಲ್ಲದಾ | ಭೀತಿಪ್ರದ ಜನಾ |**
**ನೀತಿ ಕಂಡು ಭಯಭೀತರಾದಗೆ || ನೀನೇ ||**
**ನೆರಳಿಗೆ ಅಂಜಿದ ತರಳೆ ತರಳೆಯರ**
**ಕರುಳ ಹಿಚುಕುವಾ ದುರುಳ ಲೋಕದೀ || ನೀನೇ ||**
**ಉಳ್ಳವರೆಡೆಯಲಿ | ಒಳ್ಳೆಯ ಜನವೇ |**
**ಕಳ್ಳರೆನಿಸುವೀ | ಸುಳ್ಳೆಯಾಳುತಿರೆ || ನೀನೇ ||**

'ನೀನೇ ಗತಿ ಕೃಷ್ಣಾ.. ಮತ್ತು ಓ ಬಂದಾ ಬಂದಾ ರಾವಣ' ಎಂಬ ಒಂದೆರಡು ಗೀತೆಗಳನ್ನು ಹೊರತು ಪಡಿಸಿದರೆ ಉಳಿದವು ಜನಪ್ರಿಯವಾಗಲಿಲ್ಲ. ಚಿತ್ರವೂ ಯಶಸ್ವಿಯಾಗಲಿಲ್ಲ.

ಅದಾದ ಕೇವಲ ಎರಡೇ ವರ್ಷದಲ್ಲಿ ಅಂದರೆ 1957ರ ಡಿಸೆಂಬರ್‌ನಲ್ಲಿ ತೆರೆಕಂಡ 'ಭಕ್ತ ಮಾರ್ಕಂಡೇಯ' ಚಿತ್ರಕ್ಕಾಗಿ ಬೇಂದ್ರೆಯವರು ಎರಡು ಗೀತೆ ರಚಿಸಿದರು. ವಿಕ್ರಂ ಸಂಸ್ಥೆಯು ನಿರ್ಮಿಸಿದ ಈ ಹಾಡುಗಳೂ ರಸಿಕರ ಮೆಚ್ಚುಗೆ ಗಳಿಸಲಿಲ್ಲ. ಬೇಂದ್ರೆ ಮತ್ತು ಚಿತ್ರರಂಗದ ನಡುವಿನ ಸಂಪರ್ಕ ಕಡಿದು ಹೋಯಿತು. ಬೇಂದ್ರೆಯವರು ಮತ್ತೆಂದೂ ಸಿನಿಮಾಕ್ಕಾಗಿ ಹಾಡು ಬರೆಯಲಿಲ್ಲ. ಆದರೆ, ಅವರು ಬರೆದ ಹಾಡುಗಳು ಸಿನಿಮಾದಲ್ಲಿ ಬಳಕೆಯಾದವು. ಅಪಾರ ಮೆಚ್ಚುಗೆ- ಜನಮನ್ನಣೆಯನ್ನೂ ಗಳಿಸಿದವು. ಬೇಂದ್ರೆಯವರ ಕವಿತೆಯನ್ನು ಸಿನಿಮಾಕ್ಕೆ ಅಳವಡಿಸುವ ಪರಿಪಾಠ ಆರಂಭವಾದದ್ದು 1963ರಲ್ಲಿ ತೆರೆಕಂಡ 'ಕುಲವಧು' ಚಿತ್ರದ ಮೂಲಕ. ಕೃಷ್ಣಮೂರ್ತಿ ಪುರಾಣಿಕ ಅವರ ಕಾದಂಬರಿ ಆಧರಿಸಿದ ಚಿತ್ರದಲ್ಲಿನ 'ಯುಗಯುಗಾದಿ ಕಳೆದರೂ..' ಗೀತೆಯು ಅಪಾರ ಮನ್ನಣೆಗೆ ಪಾತ್ರವಾಯಿತು. ಜಿ.ಕೆ. ವೆಂಕಟೇಶ್ ಅವರು ಸಂಗೀತ ಸಂಯೋಜಿಸಿದ ಗೀತೆಯನ್ನು ಎಸ್. ಜಾನಕಿ ಅವರು ಸೊಗಸಾಗಿ ಹಾಡಿದ್ದಾರೆ. ಪ್ರತಿವರ್ಷ ಬರುವ ಯುಗಾದಿ ಹಬ್ಬದ ಸಿಗ್ನೇಚರ್ ಸಾಂಗ್ ಆಗಿದೆ.

ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರು ತಮ್ಮ ಮೊದಲ ಚಿತ್ರ 'ಬೆಳ್ಳಿಮೋಡ'ಕ್ಕಾಗಿ ತ್ರಿವೇಣಿ ಅವರ ಕಾದಂಬರಿಯನ್ನು ಆಯ್ಕೆ ಮಾಡಿಕೊಂಡರು. 'ಬೆಳ್ಳಿಮೋಡ' ಚಿತ್ರದಲ್ಲಿ ಬಳಸಲಾದ ಬೇಂದ್ರೆಯವರ 'ಬೆಳಗು' ಪದ್ಯವು ಕನ್ನಡದ ಚಿತ್ರಗೀತೆಗಳಲ್ಲಿಯೇ ಪ್ರಮುಖವಾದದ್ದು. ಸುಮಧುರ ಸಂಗೀತ, ಗಾಯನ ಹಾಗೂ ಸುಂದರ ಚಿತ್ರೀಕರಣದಿಂದಾಗಿ ಈ ಹಾಡು ಪುಟ್ಟಣ್ಣನವರಿಗೆ ಹಾಗೂ ಅವರ ಮೊದಲ ಚಿತ್ರಕ್ಕೆ ವಿಶೇಷ ಮೆರುಗು ತಂದು ಕೊಟ್ಟಿತು. ವಿಜಯಭಾಸ್ಕರ್ ಅವರು ಸಂಗೀತ ಸಂಯೋಜಿಸಿದ ಗೀತೆಯನ್ನು ಎಸ್. ಜಾನಕಿ ಹಾಡಿದ್ದರು.

'ಬೆಳ್ಳಿಮೋಡ' ಚಿತ್ರದ ಹಾಡು

ಅದೇ ವರ್ಷ ನಿರ್ಮಾಣವಾದ ತ.ರಾ.ಸು. ಅವರ ಕಾದಂಬರಿ